International Journal of Kannada Research
www.kannadajournal.com

ISSN: 2454–5813
IJKR 2019; 5(3): 07-09
© 2019 IJKR
www.kannadajournal.com
Received: 05-05-2019
Accepted: 08-06-2019

**ಮಮತಾ ಮನ್ವಾಚಾರ್**
ಸಂಶೋಧನಾ ವಿದ್ಯಾರ್ಥಿನಿ
ಸಂಗೀತ ವಿಭಾಗ ಕನ್ನಡ
ವಿಶ್ವವಿದ್ಯಾಲಯ, ಹಂಪಿ

**Correspondence**
**ಮಮತಾ ಮನ್ವಾಚಾರ್**
ಸಂಶೋಧನಾ ವಿದ್ಯಾರ್ಥಿನಿ
ಸಂಗೀತ ವಿಭಾಗ ಕನ್ನಡ
ವಿಶ್ವವಿದ್ಯಾಲಯ, ಹಂಪಿ

# ಇಂದಿನ ಸಂಗೀತ ಶಿಕ್ಷಣ

**ಮಮತಾ ಮನ್ವಾಚಾರ್**

ಲಲಿತ ಕಲೆಗಳಲ್ಲಿ ಪ್ರಮುಖವಾಗಿರುವ ಸಂಗೀತ ಕಲೆಯು ಪ್ರದರ್ಶನ ಕಲೆಯಾಗಿರುವುದರಿಂದ ಈ ಕಲೆಯು ಪ್ರಗತಿ ಹೊಂದಲು ಉದಯೋನ್ಮುಖ ಸಂಗೀತಗಾರರಿಗೆ ವೇದಿಕೆಗಳನ್ನು ಒದಗಿಸಿಕೊಡುವುದು ಅವಶ್ಯವಾಗಿದೆ. ಹಿಂದಿನ ಕಾಲದಲ್ಲಿ ಈ ರೀತಿ ವೇದಿಕೆಗಳನ್ನು ದೇವಾಸ್ಥಾನಗಳಲ್ಲಿ, ಅರಮನೆಗಳಲ್ಲಿ ಪ್ರದರ್ಶನವನ್ನು ನೀಡುವ ಅವಕಾಶವಿರುತ್ತಿತ್ತು. ಇಂದಿನ ದಿನಗಳಲ್ಲಿ ಸಾರ್ವಜನಿಕರು ಮತ್ತು ಸರ್ಕಾರಗಳು ಯುವ ಕಲಾವಿದರಿಗೆ ವೇದಿಕೆಗಳನ್ನು ಒದಗಿಸಿಕೊಡುತ್ತಿವೆ. ಸರ್ಕಾರಗಳು ನಡೆಸುವ ಕಾರ್ಯಕ್ರಮಗಳ ಆಶ್ರಯದಲ್ಲಿ ಒಂದಷ್ಟು ಅವಕಾಶಗಳು ದೊರೆಯುತ್ತಿವೆ, ಹಾಗೂ ಕೆಲವು ಯುವ ಗಾಯಕರು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಇಲ್ಲವೆ ಸಂಘ ಸಂಸ್ಥೆಗಳ ಸಹಯೋಗದಲ್ಲಿ ವೇದಿಕೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಉದಾಹರಣೆಗೆ ಕನ್ನಡ ಸಂಸ್ಕೃತಿ ಇಲಾಖೆಯ ವತಿಯಿಂದ ಅನೇಕ ಸಂಗೀತ ಕಾರ್ಯಕ್ರಮಗಳು ಸಣ್ಣ ಪುಟ್ಟ ಹಳ್ಳಿಗಳಲ್ಲೂ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ.

ಅಕಾಡೆಮಿಗಳಿಂದ ಲಲಿತಕಲೆಯಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ. ಲಲಿತಕಲೆಯಲ್ಲಿಯೇ ವಿಶೇಷವಾದ ಅಧ್ಯಯನವನ್ನು ಕೈಗೊಂಡಂತಹ ಸಂಶೋಧನಾ ವಿದ್ಯಾರ್ಥಿಗಳಿಗೆ ಫೆಲೋಶಿಪ್‌ಗಳನ್ನು ಒದಗಿಸಲಾಗುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅಕಾಡೆಮಿಗಳ ಮೂಲಕ ಸಂಸ್ಕೃತಿ ಇಲಾಖೆಯ ವತಿಯಿಂದ ಅನೇಕ ಪ್ರಶಸ್ತಿಗಳು ಸಂಗೀತಗಾರರಿಗೆ ದೊರೆಯುತ್ತಿವೆ. ಹಿಂದಿನ ದಿನಗಳಲ್ಲಿ ಅಕಾಡೆಮಿಗಳ ಮೂಲಕ ಅಲ್ಪಪ್ರಮಾಣದ ಮೊತ್ತವನ್ನು ನೀಡಲಾಗುತ್ತಿತ್ತು, ಆದರೆ ಇಂದು ದೊಡ್ಡ ಪ್ರಮಾಣದ ಮೊತ್ತವನ್ನು ನೀಡಿ ಗೌರವಿಸಲಾಗುತ್ತಿರುವುದರಿಂದ ಅಪಾರ ಪ್ರಮಾಣದ ಸಂಗೀತಗಾರರು ಇದರ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ಸಂಗೀತಗಾರರ ಒಂದು ದೊಡ್ಡ ದಂಡೇ ತಯಾರಾಗುತ್ತಿರುವುದರಿಂದ ಭಾರತದಲ್ಲಿ ತಮ್ಮ ಸಂಗೀತದ ಛಾಪನ್ನು ಮೂಡಿಸಿದವರು ಅಕ್ಕ ಪಕ್ಕದ ದೇಶಗಳಿಗೂ ಭೇಟಿಕೊಟ್ಟು ಕಾರ್ಯಕ್ರಮ ನೀಡಿ ವಾಪಸಾಗುವವರು ಇರುವಂತೆ ಅಲ್ಲಿಯೇ ನೆಲೆಸಿ ಒಂದಷ್ಟು ವರ್ಷಗಳವರೆಗೂ ಆಸಕ್ತಿಯಿರುವ ವಿದ್ಯಾರ್ಥಿಗಳಿಗೆ ಸಂಗೀತದ ತರಬೇತಿಯನ್ನು ನೀಡಿ ಉತ್ತಮ ಸಂಗೀತಗಾರರನ್ನಾಗಿ ತಯಾರು ಮಾಡುವವರೂ ಇದ್ದಾರೆ. ಹಾಗೆಯೇ ಇನ್ನೂ ಕೆಲವರು ಅಲ್ಲಿಯೇ ನೆಲೆಸಿ ಸಂಗೀತ ಪಾಠಶಾಲೆಗಳನ್ನು ತೆರೆದು ಸಂಗೀತ ಕಲಿಸುವುದರಲ್ಲಿಯೇ ತೃಪ್ತಿ ಹೊಂದಿದವರೂ ಇದ್ದಾರೆ. ಇಂಥವರಲ್ಲಿ ಹಿಂದುಸ್ತಾನಿ ಸಂಗೀತಗಾರರೂ, ಕರ್ನಾಟಕ ಸಂಗೀತಗಾರರೂ ಇದ್ದಾರೆ. ಇವರಿಂದಾಗಿ ಯುವ ಸಂಗೀತಗಾರರಿಗೆ ಒಂದಷ್ಟು ವೇದಿಕೆಗಳಲ್ಲಿ ಗಾಯನ ನೀಡುವ ಅವಕಾಶಗಳು ದೊರೆಯುತ್ತಿವೆ. ಈ ಎಲ್ಲಾ ಕಾರಣಗಳಿಂದ ಬೇರೆ ಬೇರೆ ದೇಶಗಳಲ್ಲೂ ನಮ್ಮ ಭಾರತೀಯ ಸಂಗೀತವು ಬೆಳೆಯಲು ಸಹಾಯವಾಗುತ್ತಿದೆ.

ಪಾರಂಪರಿಕವಾಗಿ ಶಾಸ್ತ್ರೀಯ ಸಂಗೀತವನ್ನು ಮುಂದುವರೆಸಿಕೊಂಡು ಬಂದವರಿಂದ ಹಾಗೂ ಶಿಷ್ಯಸಂಪ್ರದಾಯದ ಮೂಲಕ ಸಂಗೀತವನ್ನು ಬೆಳೆಸಿಕೊಂಡು ಬಂದವರ ಮಧ್ಯೆ ಅಗಾಧ ವ್ಯತ್ಯಾಸಗಳಿದ್ದು ಅವರವರದೇ ರೀತಿಯ ಕಟ್ಟುಪಾಡುಗಳನ್ನು ಈ ಎರಡೂ ಸಂಪ್ರದಾಯಗಳಲ್ಲಿ ಕಾಣುತ್ತೇವೆ. ಗುರುಕುಲ ಪದ್ಧತಿಯ ಮೂಲಕ ಶಾಸ್ತ್ರೀಯವಾಗಿ ಸಂಗೀತವನ್ನು ಕಲಿತವರಿಗೂ, ಶಿಕ್ಷಣ ಸಂಸ್ಥೆಗಳ ಮೂಲಕ ಸಂಗೀತವನ್ನು ತಮ್ಮದಾಗಿಸಿಕೊಳ್ಳುವವರಿಗೂ ಅಂತರವಿದೆ.

ಹಿಂದಿನ ಕಾಲದಲ್ಲಿ ಗುರುಕುಲ ಪದ್ಧತಿಯಲ್ಲಿ ಸಂಗೀತವನ್ನು ತಮ್ಮ ತಮ್ಮ ಗುರುಗಳ ಮುಖೇನ ಶ್ರದ್ಧಾಭಕ್ತಿಯಿಂದ, ತಾಳ್ಮೆಯಿಂದ ಕಲಿಯುತ್ತಿದ್ದರು. ಮತ್ತು ಈ ರೀತಿಯ ಸಂಗೀತ ಪದ್ಧತಿಯನ್ನು ತಿಳಿದುಕೊಳ್ಳುತ್ತಲೇ ತಮ್ಮ ಜೀವನದ ಮೌಲ್ಯಗಳನ್ನೂ ಅರಿತುಕೊಳ್ಳುವ ಅವಕಾಶಗಳು ಇರುತ್ತಿದ್ದವು. ಇದಕ್ಕೆ ತಾಳ್ಮೆಯ ಅವಶ್ಯಕತೆಯಿರುತ್ತಿತ್ತು, ಕೇವಲ ಒಂದೇ ರಾಗವನ್ನು ಸುಮಾರು ಮೂರು ವರ್ಷಗಳ

ಕಾಲವೂ ಅಭ್ಯಾಸ ಮಾಡಿಸಿದಂತಹ ಉದಾಹರಣೆಗಳನ್ನು ಹಿರಿಯ ಸಂಗೀತಗಾರರ ಜೀವನ ಚರಿತ್ರೆಯನ್ನು ಓದಿದಾಗ ತಿಳಿದುಬರುತ್ತದೆ.

ಆದರೆ ಇಂದಿನ ವಿದ್ಯಾರ್ಥಿಗಳಲ್ಲೂ, ಕೆಲವು ಗುರುಗಳಲ್ಲೂ ತಾಳ್ಮೆಯೇ ಇಲ್ಲದಿರುವುದು (ಅನೇಕರಲ್ಲಿ) ಕಂಡುಬರುತ್ತಿದೆ. ಇಂಥವರಿಂದ ಗುಣಮಟ್ಟದ ಸಂಗೀತವನ್ನು ನಿರೀಕ್ಷೆ ಮಾಡುವುದೇ ಮೂರ್ಖತನವಾಗಿದೆ. ಕೆಲಸಕ್ಕೆ ಸೇರಿದ್ದೇವೆ, ಕಲಿಸಬೇಕು ಅಷ್ಟೇ ಎಂದು ಸಂಗೀತ ಕಲಿಸುವವರ ಮಧ್ಯೆ ಸಂಗೀತ ಕಲಿಯಲು ಬಂದಿದ್ದೇವೆ, ಕಲಿಯಬೇಕೆಂಬ ವಿದ್ಯಾರ್ಥಿಗಳೂ ಸಾಕಷ್ಟು ಸಂಖ್ಯೆಯಲ್ಲಿದ್ದಾಗ್ಯೂ ಇವತ್ತಿಗೂ ಶ್ರದ್ಧೆಭಕ್ತಿ ತಾಳ್ಮೆಯಿಂದ ಕಲಿಸುವ, ಕಲಿಯುವ ಒಂದು ವರ್ಗವಿದ್ದೇ ಇದೆ. ಆದರೆ ಇಂತಹ ವರ್ಗ ಕಡಿಮೆ ಪ್ರಮಾಣದಲ್ಲಿದೆ. ಬಹುಜನರು ಧಾವಂತದಿಂದ ಎಲ್ಲವನ್ನೂ ಕಲಿತು ಬೇಗ ವೇದಿಕೆ ಪ್ರದರ್ಶನ ನೀಡಬೇಕು, ಪ್ರಸಿದ್ಧಿ ಹೊಂದಬೇಕು, ಹೇರಳವಾಗಿ ಹಣಸಂಪಾದನೆ ಮಾಡಬೇಕು ಎಂದು ಕೊಂಡಿರುವವರ ಪ್ರಮಾಣವೇ ಹೆಚ್ಚಾಗಿದೆ.

ಇಂದಿನ ಕಲಾಪ್ರಪಂಚದಲ್ಲಿ ಹೊಸ ಹೊಸ ಪ್ರಯೋಗಗಳ ನೆಪದಲ್ಲಿ ಕಿಚಡಿ ಪ್ರಯೋಗಗಳೇ ಹೆಚ್ಚಾಗಿ ಕಂಡುಬರುತ್ತಿವೆ. ಹಿಂದಿನ ಮೌಲ್ಯಗಳಿಗೆ ಬದ್ಧರಾಗಿ ಇಂದಿನ ಸಂಗೀತ ಶಿಕ್ಷಣದಲ್ಲಿ ಒಂದಷ್ಟು ಮಾರ್ಪಾಡುಗಳನ್ನು ಅಳವಡಿಸಿಕೊಂಡು ಸಂಗೀತ ಶಿಕ್ಷಣವನ್ನು ಕೈಹಿಡಿದು ನಡೆಸಿಕೊಂಡು ಹೋಗುವ ಅವಶ್ಯಕತೆ, ಅನಿವಾರ್ಯಗಳಿವೆ. ಶೈಕ್ಷಣಿಕವಾಗಿ ಸಂಗೀತವನ್ನು ಕಲಿಸುವ ಶಾಲಾ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕ ವಿಭಾಗಗಳನ್ನು ತೆರೆದು ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಪ್ರಾರಂಭದಲ್ಲಿಯೇ ನಿಜವಾದ ಆಸಕ್ತಿಯಿರುವ ಮಕ್ಕಳಿಗೆ ಅವಕಾಶವನ್ನು ನೀಡಿ ಅವರವರ ಆಸಕ್ತಿ ವಲಯಗಳಲ್ಲಿಯೇ ಮುಂದುವರೆಯುವಂತೆ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕಿದೆ.

ಪ್ರತೀ ಮಕ್ಕಳಲ್ಲೂ ಒಂದಲ್ಲಾ ಒಂದು ಪ್ರತಿಭೆಯಿದ್ದೆಯಿರುತ್ತದೆ. ಹಾಗೂ ಅದರಲ್ಲಿ ಅವರವರದೇ ಹಿಡಿತವನ್ನು ಸಾಧಿಸಬಲ್ಲವರಾಗಿರುತ್ತಾರೆ. ಕೆಲವರು ಶಾಸ್ತ್ರೀಯ ಖ್ಯಾಲ್ ಗಾಯನವನ್ನು ಪ್ರಸ್ತುತಪಡಿಸುವರಾಗಿದ್ದರೆ ಕೆಲವರು ಲಘು ಸಂಗೀತದಲ್ಲಿ ಅಭಿರುಚಿ ಹೊಂದಿದವರಾಗಿರುತ್ತಾರೆ. ಅವರವರ ಆಸಕ್ತಿ ವಲಯಗಳಲ್ಲೇ ತರಬೇತಿ ನೀಡಿದಾಗ ವಿದ್ಯಾರ್ಥಿಗಳೂ ಆಸಕ್ತಿಯಿಂದ ಕಲಿಯಲು ಸಾಧ್ಯವಾಗುತ್ತದೆ. ಕೆಲವೊಮ್ಮೆ ಕೇವಲ ನಿಯಮಗಳಿಗಾಗಿ ಒಂದಷ್ಟು ಪಠ್ಯವನ್ನು ಸೇರಿಸಿದಾಗ ಹೊರೆಯಾಗುವುದಲ್ಲದೆ ಯಾವ ವಿಷಯದಲ್ಲೂ ಪ್ರಾವೀಣ್ಯತೆ ಸಾಧಿಸುವುದು ಅಸಾಧ್ಯವಾಗುತ್ತದೆ.

ಇಂದಿನ ಶಿಕ್ಷಣವ್ಯವಸ್ಥೆಯಲ್ಲಿ ವಾದ್ಯಕಲಿಕೆಯನ್ನು ಸೇರಿಸಿರುವುದು (ಕೆಲವೊಂದು ವಿಶ್ವವಿದ್ಯಾಲಯಗಳಲ್ಲಿ ಈ ವ್ಯವಸ್ಥೆಯಿದೆ) ಅನುಕೂಲವೇ ಆಗಿದೆ. ಹಾಡುಗಾರಿಕೆಯಲ್ಲಿ ಹಿಂದೆ ಬಿದ್ದವರು, ಉತ್ತಮ ಶಾರೀರವಿಲ್ಲದವರು ವಾದ್ಯಗಳಲ್ಲಿ ತರಬೇತಿ ಪಡೆದು ಕೊಳ್ಳಬಹುದು. ಮೊದಲೆಲ್ಲಾ ಕೇವಲ ಗಂಡು ಮಕ್ಕಳಷ್ಟೇ ಈ ರೀತಿಯ ಶಿಕ್ಷಣ ಪಡೆಯುತ್ತಿದ್ದರು. ಆದರೆ ಇಂದು ಹೆಣ್ಣುಮಕ್ಕಳೂ ವಾದ್ಯಗಳ ನುಡಿಸುವಿಕೆಯಲ್ಲಿ ಪರಿಣತಿಯನ್ನು ಪಡೆದುಕೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಶಾಸ್ತ್ರೀಯ ಸಂಗೀತದ ಜೊತೆ ಜೊತೆಯಲ್ಲಿಯೇ ಶಾಸ್ತ್ರೀಯ ವಾದ್ಯಗಳ ಶಿಕ್ಷಣವನ್ನೂ ಒಟ್ಟೊಟ್ಟಿಗೇ ನೀಡುತ್ತಿವೆ. ತಬಲಾ ಸಾಥಿದಾರರಾಗಿ ವಿದ್ಯಾರ್ಥಿನಿಯರು ಇದ್ದರೂ ಬೆರಳೆಣಿಕೆಯಲ್ಲಿ ಎಂದೇ ಹೇಳಬಹುದು. ಇಲ್ಲೂ ಸೇಫ್‌ಜೋನ್ ಕಾಯ್ದುಕೊಳ್ಳುವ ಜರೂರಿದೆ.

ಇಂದಿನ ಭಾರತೀಯ ಸಂಗೀತಶಾಸ್ತ್ರಕಲೆಯ ಸ್ಥಿತಿ–ಗತಿಗಳನ್ನು ಅಧ್ಯಯನದ ದೃಷ್ಟಿಯಿಂದ ಪರಿಶೀಲನೆ ಮಾಡಿದಾಗ ಸಂಗೀತ ಕಲಿಕೆಯ ಬಗ್ಗೆ, ಸಂಗೀತ ಪ್ರದರ್ಶನಕ್ಕೆ ಇರುವಂತಹ ಅವಕಾಶಗಳು, ಸಂಗೀತಕ್ಕೆ ದೊರೆಯುತ್ತಿರುವ ಪ್ರೋತ್ಸಾಹ, ಸಂಗೀತ ಕ್ಷೇತ್ರದಲ್ಲಿ ಆಗುತ್ತಿರುವ ಇತ್ತೀಚಿನ ಬೆಳವಣಿಗೆಗಳು, ಸಂಗೀತದ ಹೊಸದಿಕ್ಕಿನ ಪ್ರಯಾಣ, ಸಂಗೀತ ಕ್ಷೇತ್ರದ ಹೊಸ ಹೊಸ ಪ್ರಯೋಗಗಳು ಇವೇ ಮುಂತಾದ ದೃಷ್ಟಿ ಕೋನದಿಂದ ಅಧ್ಯಯನ ಮಾಡಬಹುದಾಗಿದೆ.

ಹಿಂದಿನ ಕಾಲದ ಗುರುಕುಲ ಪದ್ಧತಿಯಲ್ಲಿ ದೊರೆಯುತ್ತಿದ್ದ ಸಂಗೀತದಿಂದ ಇಂದಿನ ಸಂಗೀತ ಕಲಿಕೆಯ ವಿಧಾನದಲ್ಲಿ ಅನೇಕ ಮಾರ್ಪಾಡುಗಳನ್ನು ಕಾಣುತ್ತಾ ಬಂದಿದ್ದೇವೆ. ಮೊದಲೆಲ್ಲಾ ಸಂಗೀತ ಶಿಕ್ಷಣವು ಕೇವಲ ಗುರುಕುಲದಲ್ಲಿ ಮಾತ್ರ ನಡೆಯುತ್ತಿತ್ತು. ಸಣ್ಣ ವಯಸ್ಸಿನ ವಿದ್ಯಾರ್ಥಿಗಳು ಗುರುಕುಲದಲ್ಲೇ ನೆಲೆಸಿ ಸಂಗೀತ ಶಿಕ್ಷಣವನ್ನು ಪಡೆಯುವಂತಹ ಅವಕಾಶಗಳಿರುತ್ತಿದ್ದವು. ಇಂದಿನ ದಿನಗಳಲ್ಲಿ ಸಂಗೀತ ಕಲಿಕಾ ವಿಧಾನದಲ್ಲಿ ಪರಿಣತರಾದ ಗುರುಗಳ ಮುಖೇನ ಅವರವರ ಮನೆಗಳಲ್ಲಿ ಕಲಿಯುವುದು, ಇದಲ್ಲದೆ ಈ ಗುರುಗಳು ತಾವೇ ನಡೆಸುವ ಖಾಸಗಿ ಸಂಗೀತ ಶಾಖೆಗಳಲ್ಲಿ ಕಲಿಯುವುದರ ಜೊತೆಗೆ ಸಂಗೀತಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅಧ್ಯಯನವನ್ನು ಮತ್ತು ಸಂಶೋಧನೆಗಳನ್ನು ಕೈಗೊಳ್ಳಲು ಅನೇಕ ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ ಅವಕಾಶವಿದೆ. ಉದಾಹರಣೆಗೆ ಗಂಧರ್ವ ಮಹಾವಿದ್ಯಾಲಯ, ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಗುಲ್ಬರ್ಗಾ, ರಾಯಚೂರು, ಗದಗ ಮುಂತಾದ ಸ್ಥಳಗಳ ವಿಶ್ವವಿದ್ಯಾಲಯಗಳಲ್ಲಿ ನೂರಾರು ವಿದ್ಯಾರ್ಥಿಗಳು ಸಂಗೀತ ಶಿಕ್ಷಣವನ್ನು ಪದವಿ, ಸ್ನಾತಕೋತ್ತರ ಪದವಿ, ಪಿ.ಎಚ್.ಡಿ ಪಡೆದುಕೊಂಡು ಸಂಗೀತ ಕ್ಷೇತ್ರದಲ್ಲಿ ಹೆಜ್ಜೆ ಇಟ್ಟಿದ್ದಾರೆ.

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಯಾವುದೇ ಸಂಗೀತ ಪ್ರಕಾರದಲ್ಲೂ ಇಷ್ಟು ಸಂಖ್ಯೆಯಲ್ಲಿ ಸಂಗೀತ ವಿದ್ಯಾರ್ಥಿಗಳು ಇರುತ್ತಿರಲಿಲ್ಲ. ಶಾಸ್ತ್ರೀಯ ಸಂಗೀತ ಪ್ರಕಾರದಲ್ಲಂತೂ ವಿದ್ಯಾರ್ಥಿಗಳ ಸಂಖ್ಯೆ ತೀರಾ ಕಡಿಮೆ ಎಂದೇ ಹೇಳಬಹುದು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಪದವಿ, ಸ್ನಾತಕೋತ್ತರ ಮಟ್ಟದಲ್ಲಿ ಅನೇಕ ವಿದ್ಯಾರ್ಥಿಗಳನ್ನು ಕಾಣುತ್ತಿದ್ದೇವೆ. ಏಳೆಂಟು ವರ್ಷಗಳ ಹಿಂದೆ ನಾನು ಸಂಗೀತದಲ್ಲಿ ಪದವಿ ಪಡೆಯುತ್ತಿದ್ದ ಸಂದರ್ಭವನ್ನೇ ನೆನಪಿಸಿಕೊಳ್ಳುವುದಾದರೆ ಕೇವಲ ಐದು ವಿದ್ಯಾರ್ಥಿಗಳಷ್ಟೇ ಇದ್ದೆವು. ನಮ್ಮ ಹಿಂದಿನ ಬ್ಯಾಚ್‌ನಲ್ಲಂತೂ ಕೇವಲ ಒಬ್ಬೇ ಒಬ್ಬ ವಿದ್ಯಾರ್ಥಿನಿಯಿದ್ದು ವಿಭಾಗವನ್ನೇ ಮುಚ್ಚುವಂತಹ ಪರಿಸ್ಥಿತಿಯನ್ನು ಎದುರಿಸಿದ್ದನ್ನು ನಮ್ಮ ಹಿರಿಯ ಅಧ್ಯಾಪಕರಿಂದ ಕೇಳಿ ತಿಳಿದಿದ್ದೇನೆ. ಆದರೆ ಇಂದು ಮೊದಲ ವರ್ಷದ ಪದವಿ ತರಗತಿಗಳಲ್ಲಿ ಹದಿನೈದಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿದ್ದಾರೆ. "ಸಂಗೀತ ವಿದ್ಯಾರ್ಥಿಗಳ ಸಂತತಿ ಸಾವಿರವಾಗಲಿ" ಎಂದು ಆಶಿಸುತ್ತೇನೆ.

ಕೆಲವೇ ಕೆಲವು ಮನೆತನಗಳಿಗಷ್ಟೇ ಸೀಮಿತವಾಗಿದ್ದಂತಹ ಸಂಗೀತ ಕಲೆಯು ಇಂದು ಎಲ್ಲರಿಗೂ ದೊರೆಯುವಂತಾಗಿದೆ. ಸಮಾಜದಲ್ಲಿನ ಎಲ್ಲಾ ಸ್ತರಗಳ ಜನರೂ ಸಂಗೀತ ಕಲಿಯಲು ಆಸಕ್ತಿಯನ್ನು ತೋರುತ್ತಿದ್ದಾರೆ. ಸಂಗೀತದಲ್ಲಿ ಪದವಿಯನ್ನು ಪಡೆದು ಅನೇಕರು ತಮ್ಮದೇ ಒಂದು ಜೀವನವನ್ನು ಕಟ್ಟಿಕೊಳ್ಳುವಲ್ಲಿ ಯಶಸ್ವಿಯೂ ಆಗಿದ್ದಾರೆ. ಸಂಗೀತವನ್ನು ಶಾಸ್ತ್ರಬದ್ಧವಾಗಿ ವಿವರಿಸಿ ಗಾಯನವನ್ನು ಹೇಳಿಕೊಡುವ, ಸಂಗೀತ ಶಾಸ್ತ್ರಸಂಬಂಧೀ ಪಠ್ಯವನ್ನು ಸುಲಭವಾಗಿ ಗ್ರಹಿಸುವಂತೆ ಪಾಠ ಮಾಡುವವರಿದ್ದಾರೆ. ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಬರೆದವರಿದ್ದಾರೆ. ಹೊಸ ಹೊಸ ರಾಗಗಳನ್ನು ಕಂಡು ಹಿಡಿದವರಿದ್ದಾರೆ. ಸಂಗೀತ ಶಿಕ್ಷಕರು ಇಂದು ಆರ್ಥಿಕವಾಗಿ ಸಬಲರಾಗಿದ್ದಾರೆ. ಕೆಲವರಂತೂ ಇನ್ನೂ ಹಿಂದಿನ ಕಾಲದ ಸಂಗೀತ ಶಿಕ್ಷಕರಂತೆ ಅಂದಂದಿನ ಊಟದ ಚಿಂತೆಯನ್ನು ನೀಗಿಸಿಕೊಳ್ಳುವ ಸ್ಥಿತಿಯಲ್ಲಿ ಇರವವರೂ ಇದ್ದಾರೆ.

ಎಲ್ಲಾ ಕ್ಷೇತ್ರಗಳಲ್ಲೂ ಇರುವಂತೆ ಸಂಗೀತ ಕ್ಷೇತ್ರದಲ್ಲೂ ಒಳ್ಳೆಯದು, ಕೆಟ್ಟದ್ದು, ಶ್ರೇಷ್ಠ–ಕನಿಷ್ಠ, ಮೇಲು–ಕೀಳು ಎಂಬ ಭಾವ, ಒಬ್ಬರನ್ನು ತುಳಿದು ಮತ್ತೊಬ್ಬರು ಮುಂದೆ ಹೋಗುವ ಹೊಲಸು ರಾಜಕೀಯ ಮಾಡಿ ಅರ್ಹತೆಯಿಲ್ಲದಿದ್ದರೂ ಉನ್ನತ ಸ್ಥಾನಗಳನ್ನು ಅಲಂಕರಿಸಿರುವ, ಜಾತಿಯ ವಿಷಬೀಜಬಿತ್ತುವ, ಮನಸ್ಥಾಪಗಳನ್ನು ತಂದಿಟ್ಟು ಸಂತೋಷವನ್ನು ಅನುಭವಿಸುವ, ಪಾಠಮಾಡದೆ ಕಾಡು ಹರಟೆ ಮಾಡುತ್ತಾ ಲಕ್ಷ ಲಕ್ಷ ಸಂಬಳ ಎಣಿಸುವ, ವಿದ್ಯೆಯ ಗುಟ್ಟನ್ನು ಬಿಟ್ಟುಕೊಡದೆ ವಿದ್ಯಾರ್ಥಿಗಳನ್ನು ಸದಾ ನಿಂದಿಸುತ್ತಾ, ಅವರಲ್ಲಿರುವ ಮನೋಸ್ಥೈರ್ಯವನ್ನು ಕುಗ್ಗಿಸಿ ಉಸಿರು ಕಟ್ಟುವಂತಹ ವಾತಾವರಣವನ್ನು ಸೃಷ್ಟಿಸಿರುವ ವ್ಯಕ್ತಿಗಳ ಮಧ್ಯೆ ತಾನಾಯಿತು, ತಮ್ಮ ಸಂಗೀತ ಅಭ್ಯಾಸವೆಂದು ವಿದ್ಯಾರ್ಥಿಗಳ ಒಳಿತಿಗಾಗಿ ಶ್ರಮಿಸುವ, ಉತ್ಸಾಹ ತುಂಬುವಂತಹ ಮಾತನ್ನಾಡುವ ವಿನಯವಂತ ಸಂಗೀತಗಾರರೂ ಇದ್ದಾರೆ ಎಂಬುದೇ ಸಂತಸದ ವಿಷಯವಾಗಿದೆ. ವಿದ್ಯಾರ್ಥಿಗಳಾದರೂ ಕೇವಲ ಸ್ಕಾಲರ್‌ಶಿಪ್‌ಗಳ ಆಸೆಗಾಗಿ ಸಂಗೀತ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳದೆ ಆಸಕ್ತಿಯಿಂದ ಈ ಕ್ಷೇತ್ರದಲ್ಲಿ ಕಾಲಿರಿಸಿ ಪ್ರಾಮಾಣಿಕವಾಗಿ ಅಭ್ಯಾಸ ಮಾಡಲು ಪ್ರಯತ್ನಿಸಿದರೆ ಖಂಡಿತವಾಗಿಯೂ ಉತ್ತಮ ಸಂಗೀತಗಾರರಾಗುವುದರಲ್ಲಿ ಸಂದೇಹವಿಲ್ಲ ಎಂದೇ ಹೇಳಬಹುದು.

**ಪರಾಮರ್ಶನ ಕೃತಿಗಳು**


1. ಅಂತರ್ಜಾಲ ಮಾಹಿತಿ
2. ಕರ್ನಾಟಕ ವೈಭವ; ನೀಲಾ ಮಂಜುನಾಥ್, ಕರ್ನಾಟಕ ಸರ್ಕಾರ, ಬೆಂಗಳೂರು
3. ಕರ್ನಾಟಕ ಸಂಗೀತ ವಾಹಿನಿ; ರಾ. ಸತ್ಯನಾರಾಯಣ; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
4. ಶತಮಾನದ ಶಕಪುರುಷ ಏಣಗಿ ಬಾಳಪ್ಪ; ಎ. ಶೇಖ(ಮಾಸ್ತರ) ಸಂ. ಗುಡಿಹಳ್ಳಿ ನಾಗರಾಜ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
5. ಸಾಹಿತ್ಯ ಮತ್ತು ಸಂಸ್ಕೃತಿ; ಎನ್. ಚಂದ್ರಶೇಖರ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
6. ಕನಕದಾಸರ ಕಾವ್ಯ ಮತ್ತು ಸಂಗೀತ; ಕೆ.ಎಸ್. ಪವಿತ್ರ, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.